
# ಮೂವರು ದಿವ್ಯಜೀವಿಗಳ ಕಥೆ



| | |
|---|---|
| *ಕೃತಿಗಳು* | : **ರಾಣಿ ರಾಸಮಣಿ**<br>**ಮಥುರಾನಾಥ ವಿಶ್ವಾಸ**<br>**ನಾಗ ಮಹಾಶಯ** |
| *ಲೇಖಕರು* | : **ವಿರಾಜ ಮಂಗಲಗಿ** |
| *ಪ್ರಕಾಶಕರು* | : **ವಿವೇಕಹಂಸ ಪ್ರಕಾಶನ, ಬೆಂಗಳೂರು** |
| *ಪುಟಗಳು* : **48** | ಪ್ರತಿ ಪುಸ್ತಕದ *ಬೆಲೆ* : **25/** |

ಶ್ರೀರಾಮಕೃಷ್ಣರ ಜೀವನದೊಂದಿಗೆ ನೇರವಾಗಿ ಸಂಬಂಧ ಪಟ್ಟಿರುವ ಮೂವರು ಮಹನೀಯರ ಸಂಕ್ಷಿಪ್ತ ಜೀವನಚರಿತ್ರೆಗಳು ಇತ್ತೀಚೆಗೆ ಪ್ರಕಟವಾಗಿವೆ. ರಾಮಕೃಷ್ಣ ಆಶ್ರಮದ ಭಕ್ತರೂ, ಹಲವು ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳನ್ನು ನಡೆಸುತ್ತ ಸಕ್ರಿಯವಾಗಿ ರಾಮಕೃಷ್ಣ-ವಿವೇಕಾನಂದರ ಸಂದೇಶಗಳನ್ನು ಯುವಕರತ್ತ ಕೊಂಡೊಯ್ಯುವ ಕಾರ್ಯದಲ್ಲಿ ನಿರತರಾದವರೂ ಆದ ಶ್ರೀ ವಿರಾಜ ಮಂಗಲಗಿಯವರು ಈ ಮೂರು ಸಣ್ಣ ಗ್ರಂಥಗಳನ್ನು ರಚಿಸಿದ್ದಾರೆ. '**ವಿವೇಕಹಂಸ ಪ್ರಕಾಶನ**'ವು ಪ್ರಕಟಿಸುತ್ತಿರುವ 'ದಿವ್ಯ ಜೀವನ ಪುಸ್ತಕಮಾಲೆ'ಯ ೨೧, ೨೨ ಹಾಗೂ ೨೪ನೆಯ ಪುಸ್ತಕಗಳಾಗಿ ಇವು ಹೊರಬಂದಿವೆ. ಈ ಮಹಾವ್ಯಕ್ತಿತ್ವಗಳ ಲಘು ಪರಿಚಯ ನೀಡುವ ಈ ಪುಸ್ತಕಗಳು ಸುಲಭ ಬೆಲೆಯಲ್ಲಿ ಆಕರ್ಷಕ ರೂಪದಲ್ಲಿ ಪ್ರಕಟಗೊಂಡಿದ್ದು, ಮಕ್ಕಳು, ವಯೋವೃದ್ಧರು ಹಾಗೂ ಎಲ್ಲ ವಯಸ್ಸಿನ ಓದುಗರಿಗೆ ಸುಲಭವಾಗಿ ಓದಲು ಅನುಕೂಲಕರವಾಗಿವೆ.

ಶ್ರೀರಾಮಕೃಷ್ಣರು ಬಹಳ ದೀರ್ಘಕಾಲ ಸಾಧನೆ ಮಾಡಿ, ದಿವ್ಯೋನ್ಮತ್ತತೆಯಿಂದ ಬದುಕಿದ, ಹಲವು ಮಂದಿ ಭಕ್ತರ ಪಾಲಿಗೆ ಗುರುವಾಗಿ ಮಾರ್ಗದರ್ಶನ ಮಾಡಿದ ದಿವ್ಯದೇಗುಲ ದಕ್ಷಿಣೇಶ್ವರದ ಕಾಳೀಮಂದಿರವನ್ನು ನಿರ್ಮಿಸಿದ '**ರಾಣಿ ರಾಸಮಣಿ**'ಯ ಜೀವನಚರಿತ್ರೆ ಮೊದಲನೆಯದು. ಸ್ವತಃ ತಾನೂ ಒಬ್ಬಳು ದೈವ ಭಕ್ತೆಯಾಗಿದ್ದು, ಜಗನ್ಮಾತೆಯ ಆಣತಿಯಂತೆ ಶ್ರೀರಾಮಕೃಷ್ಣರ ಲೀಲಾಕ್ಷೇತ್ರವಾದ ಮಂದಿರದ ನಿರ್ಮಾಣಕಾರ್ಯದಲ್ಲಿ ತೊಡಗಿಕೊಂಡಳು. ಶ್ರೀರಾಮಕೃಷ್ಣರು ಆ ದೇವಾಲಯಕ್ಕೆ ಬರುವಲ್ಲಿಂದ ಆರಂಭವಾಗಿ, ತನ್ನ ಜೀವನದ ಕೊನೆಯವರೆಗೂ ರಾಣಿಯು ಅವರಿಗೆ ಅಗತ್ಯವಾದ ಎಲ್ಲ ಅನುಕೂಲತೆಗಳನ್ನೂ ಮಾಡಿಕೊಟ್ಟಳು; ಶ್ರೀರಾಮಕೃಷ್ಣರ ನೆರವಿನಿಂದ ಆಕೆಯ ಆಧ್ಯಾತ್ಮಿಕ ಜೀವನವೂ ಸಂಪನ್ನಗೊಂಡಿತು. ರಾಸಮಣಿ ಆಗರ್ಭ ಶ್ರೀಮಂತೆಯಾಗಿದ್ದೂ ಹೇಗೆ ಪರಮ ಸಾತ್ವಿಕ ಬದುಕನ್ನು ಬದುಕಿ, ಅವತಾರಪುರುಷರ ಲೀಲೆಯಲ್ಲಿ ಹೇಗೆ ಸಹಾಯಕಿಯಾದಳು ಎಂಬುದನ್ನಿಲ್ಲಿ ಮನ ಮುಟ್ಟುವಂತೆ ಚಿತ್ರಿಸಲಾಗಿದೆ.

ಎರಡನೆಯ ಪುಸ್ತಕವೇ '**ಮಥುರನಾಥ ವಿಶ್ವಾಸ**'. ರಾಣಿ ರಾಸಮಣಿಯ ನಿಧನದ ಬಳಿಕ ಅವಳ ಅಳಿಯ ಮಥುರನಾಥನು ಸಮಸ್ತ ಸೊತ್ತಿನ ಹಾಗೂ ದಕ್ಷಿಣೇಶ್ವರ ಮಂದಿರದ ಒಡೆಯನಾದ; ಅವನೂ ಶ್ರೀರಾಮಕೃಷ್ಣರ ಮೇಲೆ ಅಪಾರ ಭಕ್ತಿ-ಗೌರವಗಳನ್ನು ಹೊಂದಿದ್ದು, ಅವರ ಅಗತ್ಯಗಳನ್ನೆಲ್ಲ ಪೂರೈಸುವ ಜವಾಬ್ದಾರಿಯನ್ನು ಹೊತ್ತುಕೊಂಡನು. ಶ್ರೀರಾಮಕೃಷ್ಣರ ಒಡನಾಟ, ಮಾರ್ಗದರ್ಶನ ಹಾಗೂ ಅವರಿಗೆ ಸೇವೆ ಮಾಡುವ ಸೌಭಾಗ್ಯ ಇವುಗಳಿಂದ ಮಥುರನ ಜೀವನವು ಧನ್ಯವಾಯಿತು. ಶ್ರೀರಾಮಕೃಷ್ಣರ ಲೀಲಾಜೀವನದ ಅನೇಕ ದಿವ್ಯಕ್ಷಣಗಳಿಗೆ ಅವನು ಸಾಕ್ಷಿಯಾದನು.

ಮೂರನೆಯ ಪುಸ್ತಕ ಶ್ರೀರಾಮಕೃಷ್ಣರ ಗೃಹೀ ಭಕ್ತರಲ್ಲಿ ಅಗ್ರಗಣ್ಯರೂ, ಅಪೂರ್ವ ಆಧ್ಯಾತ್ಮಿಕ ಜೀವನದಿಂದ ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ವಿಶೇಷ ಕೃಪೆಗೆ ಪಾತ್ರರಾದವರೂ ಆದ **ನಾಗ ಮಹಾಶಯರ**ನ್ನು ಕುರಿತ ಪುಸ್ತಕ. ಶ್ರೀರಾಮಕೃಷ್ಣರ ಮಾತೆಂದರೆ ವೇದವಾಕ್ಯವೆಂದೇ ತಿಳಿದು, ಅವರ ಉಪದೇಶಗಳನ್ನು ಚಾಚೂ ತಪ್ಪದೆ ಪಾಲಿಸಿದವರು ನಾಗ ಮಹಾಶಯರು. ಅತ್ಯಂತ ಉಜ್ಜ್ವಲವಾದ ವೈರಾಗ್ಯ, ತ್ಯಾಗ, ಭಕ್ತಿಗಳಿಂದ ದೀಪ್ತವಾಗಿದ್ದ ಅವರ ತಪಸ್ವೀ ಜೀವನವನ್ನ ಸ್ವಾಮೀಜಿ ತುಂಬುಹೃದಯದಿಂದ ಕೊಂಡಾಡಿದ್ದರು. ಈ ಮಹಾತ್ಮರ ಬದುಕು, ಮಾತುಕತೆಗಳು ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಸರಳಭಾಷೆಯಲ್ಲಿ ಈ ಕೃತಿಯನ್ನು ಲೇಖಕರು ರಚಿಸಿದ್ದಾರೆ.

ಓದುಗರಿಗೆ ಪುಸ್ತಕದ ವಿಷಯ ಮನಮುಟ್ಟುವಂತೆ ಮಾಡಲು ಅಂದವಾದ ರೇಖಾಚಿತ್ರಗಳನ್ನು ನೀಡಲಾಗಿದೆ. ಆದರೆ ಈ ಎಲ್ಲ ಪುಸ್ತಕಗಳ ಮಧ್ಯಭಾಗದಲ್ಲಿ ಒಂದೇ ರೇಖಾಚಿತ್ರವಿರುವುದು, ಕಡಿಮೆಯಾಯಿತು ಅನ್ನಿಸುತ್ತದೆ. ನಡುನಡುವೆ ನಾಲ್ಕೈದು ಚಿತ್ರಗಳಾದರೂ ಇದ್ದಿದ್ದರೆ ಚೆನ್ನಾಗಿತ್ತು; ಅದು ಪುಸ್ತಕದ ಅಂದವನ್ನು ಇನ್ನಷ್ಟು ಹೆಚ್ಚಿಸುತ್ತಿತ್ತು ಎನ್ನಬೇಕು. ಪುಸ್ತಕದ ಗಾತ್ರವೇ ಚಿಕ್ಕದು; ಇನ್ನು ಚಿತ್ರಗಳೇ ತುಂಬಿಕೊಂಡರೆ ವಿಷಯ ನಿರೂಪಣೆಗೆ ಸ್ಥಳಾವಕಾಶ ಸಾಲದೆ ಹೋಗುವುದು ಎನ್ನುವ ಕಾರಣಕ್ಕಾಗಿ ಒಂದೇ ರೇಖಾಚಿತ್ರ ಇದೆಯೇನೋ! ಒಟ್ಟಿನಲ್ಲಿ ಪುಸ್ತಕದ ಆಕೃತಿ, ಬರಹದ ಶೈಲಿ, ವಿಷಯ ನಿರೂಪಣೆ ಎಲ್ಲವೂ ಅತ್ಯುತ್ತಮವಾಗಿದೆ. ಲೇಖಕ, ಪ್ರಕಾಶಕರಿಗೆ ಈ ಹೆಗ್ಗಳಿಕೆ ಸಲ್ಲಬೇಕು. ಈ ಮಾಲೆಯ ಎಲ್ಲ ಪುಸ್ತಕಗಳನ್ನೂ ಓದಿ, ಸಂಗ್ರಹಿಸಿ ಇಟ್ಟುಕೊಳ್ಳಬಹುದಾಗಿದೆ.